ಸರ್ಕಾರದವರು ಈ ಸಭೆಯಲ್ಲಿ ಪರಿಣಾಮಕಾರಿಯಾಗಿ ಹೇಳುತ್ತಾರೆ, ಇದನ್ನು ಬದಲಾವ ಮಾಡುತ್ತೇವೆಂದು ಹೇಳುತ್ತಾರೆ. ಇವ್ಯಾತ್ತು ಅವರು ರಾಷ್ಟ್ರಧ್ವಜದ ಪಕ್ಕದಲ್ಲಿ ಮರಾಠಿ ಧ್ವಜವನು ಹಾರಿಸಿ ರಾಷ್ಟ್ರಧ್ವಜಕ್ಕೆ ಅಗೌರವ ಮಾಡಿದ್ದಾರೆ. ಮತ್ತು ತಮ್ಮದೇ ಆದಂಥ ಒಂದು ಸಿದ್ಧಾಂಥವನ್ನು ನಿರೂಪಣೆ ಮಾಡಿಕೊಂಡು, ತಮ್ಮದೇ ಆದಂಥ ಒಂದು ಪಕ್ಷದ ಕಾರ್ಯಾಲಯ ಮಾಡಿಕೊಂಡಿದ್ದಾರೆ, ಇದರ ಬಗ್ಗೆ ಸರ್ಕಾರ ಸ್ಪಷ್ಟವಾದ ನಿಲುವು ಏನು? ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕು. ಧ್ವಜವನ್ನು ತೆಗೆಯುವುದಕ್ಕೆ ಸರ್ಕಾರದ ಸ್ಪಷ್ಟವಾದ ನಿಲುವು ಏನು ಎಂದು ಹೇಳಬೇಕು, ಇಲ್ಲದೇ ಹೋದರೆ ರಾಜ್ಯದ ಎಲ್ಲಾ ಪುರಸಭೆ ಮತ್ತು ನಗರಸಭೆ, ನಗರಪಾಲಿಕೆ ಮೇಲೆ ಅವರವರ ಪಕ್ಷದ ಧ್ವಜ, ಭಾಷೆಯ ಧ್ವಜ ಧರ್ಮದ ಧ್ವಜ ಹಾಕಿಕೊಳ್ಳುತ್ತಾರೆ. ಅಥವಾ ಹಾಕಿಕೊಳ್ಳಬಹುದೇ ಅನ್ನುವುದರ ಬಗ್ಗೆ ನಿರ್ಣಯ ಆಗಬೇಕು. ಇಲ್ಲವೇ ಇಷ್ಟು ದಿವಸದಲ್ಲಿ ಧ್ವಜವನ್ನು ತೆಗೆಸುತ್ತೇವೆಂದು ತಾವು ಆಶ್ವಾಸನೆಯನ್ನು ಕೊಡಬೇಕು.

ಶ್ರೀ ವೀರೇಂದ್ರ ಪಾಟೀಲ್.—ಈಗಾಗಲೇ ಮಾನ್ಯ ಕೌಜಲಗಿಯವರು ಹೇಳಿದರು, ಯಾರೋ ಕನ್ನಡ ಧ್ವಜ ಏರಿಸುವ ಮುನ್ನ ಪೋಲೀಸರು ತಡೆಗಟ್ಟಿ ಅವರ ಮೇಲೆ ಕೇಸು ಹಾಕಿದ್ದಾರೆ ಎಂದು ಅದು ನನಗೆ ಗೊತ್ತಿಲ್ಲ. ವಿವರಗಳನ್ನು ಕೊಟ್ಟರೆ ನಾನು ವಿಚಾರಿಸುತ್ತೇನೆ.

ಶ್ರೀ ಎಸ್. ಹೆಚ್. ಕೌಜಲಗಿ.—ಇದು ಬೆಂಗಳೂರಿನಲ್ಲಿಯೇ ಆಗಿದೆ.

ಶ್ರೀ ವೀರೇಂದ್ರಪಾಟೀಲ್.—ನನಗೆ ಗೊತ್ತಿಲ್ಲ. ಏಕೆಂದರೆ ಐದು ದಿವಸಗಳಿಂದ ನಾನು ಬೆಂಗಳೂರಿನಲ್ಲಿ ಇರಲಿಲ್ಲ ತಾವು ವಿವರಗಳನ್ನು ಕೊಟ್ಟರೆ ನಾನು ಅದರ ಬಗ್ಗೆ ಏನು ಸಾಧ್ಯವಿದೆಯೊ ಅದನ್ನು ತರಿಸಿ ಹೇಳುತ್ತೇನೆ. ಮತ್ತೊಂದು ಈ ರೆಸೆಲ್ಯೂಷನ್ ಸಸ್ಪೆಂಡ್ ಮಾಡುವ ಅಧಿಕಾರ ಡಿವಿಜನಲ್ ಕಮಿಷನರ್‌ರವರಿಗೆ ಇದೆ ಎಂದು ಹೇಳಿದ್ದಾರೆ ಅದನ್ನೆ ನಾನು ಹೇಳಿದ್ದು. ಕಾನೂನಿನಲ್ಲಿ ಏನು ಮಾಡಲಿಕ್ಕೆ ಸಾಧ್ಯ ಇದೆ, ಅದನ್ನು ಮಾಡುತ್ತೇನೆ. ಮತ್ತು ನಮ್ಮ ಬೆಳಗಾಂನಲ್ಲಿರತಕ್ಕ ಅಧಿಕಾರಿಗಳ ಜೊತೆ ಸಂಪರ್ಕಮಾಡಿ ಅವರಿಂದ ಏನು ವರದಿಯನ್ನು ತರಿಸಿಕೊಳ್ಳಬೇಕೋ ಅದನ್ನು ತರಿಸಿಕೊಂಡಮೇಲೆ ಕಾನೂನು ಬದ್ಧವಾಗಿ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ ಎನ್ನುವ ಮಾತನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಇನ್ನು ಮಾನ್ಯ ವಾಟಾಳ್ ನಾಗರಾಜ್ ಅವರು ಭಗವಾ ಝಂಡಾ ಇರಬೇಕೆ, ತೆಗೆಯಬೇಕೆ. ಏನ್ನುವ ಬಗ್ಗೆ ವಿಚಾರ ಪ್ರಸ್ತಾಪ ಮಾಡಿದ್ದಾರೆ. ನಾವು ಏನೇ ಮಾಡಬೇಕಾಗಿದ್ದರೂ ಕೂಡ ಕಾನೂನುಬದ್ಧವಾಗಿ ಮಾಡಬೇಕಾಗುತ್ತದೆ. ಅದರ ಬಗ್ಗೆ ಪರಿಶೀಲನೆ ಮಾಡಿ ಯೋಗ್ಯ ಕ್ರಮ ತೆಗೆದುಕೊಳ್ಳುವುದಕ್ಕೆ ತಯಾರಾಗಿದ್ದೇನೆ.

ಶ್ರೀ ವಾಟಾಳ್ ನಾಗರಾಜ್.—ತಾವು ಎಷ್ಟು ದಿವಸದಲ್ಲಿ ಕಾನೂನು ಮಾಡುವುದು ನಿಮ್ಮ ಸರ್ಕಾರ ಬಂದಾಗಿನಿಂದಲೂ ನಾನು ಹೇಳುತ್ತಿದ್ದೇನೆ ತಮಗೆ ಇನ್ನೂ ಕ್ರಮ ತೆಗೆದುಕೊಳ್ಳಲಿಕ್ಕೆ ಆಗಿಲ್ಲ. ಇದು ನಿಮ್ಮ ನಿಶ್ಯಕ್ತಿಯನ್ನು ತೋರಿಸುತ್ತದೆ. ಇದರಿಂದ ನನಗೆ ಬಹಳ ನೋವಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅಧ್ಯಕ್ಷರೆ ಫ್ಲಡ್ ಡ್ಯಾಮೇಜಸ್ ಬಗ್ಗೆ ನಾನು ಒಂದು ಕಾಲ್ ಅಟೆನ್‌ಷನ್ ನೋಟೀಸ್ ಕೊಟ್ಟಿದ್ದೆ.

(ಗೊಂದಲ)

ಅಧ್ಯಕ್ಷರು.—ಆರ್ಡರ್, ಆರ್ಡರ್.

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೆ, ಇವರ ಅಶಕ್ತತೆಯ ಬಗ್ಗೆ ನಾನು ವಿರೋಧಿಸಿ ಸಭಾತ್ಯಾಗ ಮಾಡಬೇಕಾಗಿದೆ.

(ಗೊಂದಲ)

ಅಧ್ಯಕ್ಷರು.—ಆರ್ಡರ್, ಆರ್ಡರ್, ಆರ್ಡರ್.

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೆ ನನ್ನಗೆ ಮನಸ್ಸಿಗೆ ಅತ್ಯಂತ ನೋವಾಗುತ್ತದೆ. ಈ ಸರ್ಕಾರದ ಒಂದು ಅಶಕ್ತತೆಯನ್ನು, ನಿರಾತ್ಸಾಹವನ್ನು ನಾನು ವಿಧಿಯಿಲ್ಲದೆ. ಪ್ರತಿಭಟಿಸಬೇಕಾಗುತ್ತದೆ ಇವರು ಮಾಡತಕ್ಕದ್ದು. ಸರಿಯಿಲ್ಲ ಎಂದು ಹೇಳಿ, ನಾನು ಸಭಾತ್ಯಾಗ ಮಾಡುತ್ತೇನೆ.

(ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್ ಅವರು ಸಭಾತ್ಯಾಗ ಮಾಡಿದರು)

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅಧ್ಯಕ್ಷರೆ ಫ್ಲಡ್ ಡ್ಯಾಮೇಜ್ ಬಗ್ಗೆ ನಾನು ಒಂದು ಕಾಲ್ ಅಟೆನ್‌ಷನ್ ನೋಟೀಸ್ ಕೊಟ್ಟಿದ್ದೆ. ನನ್ನ ಕಾನ್‌ಸ್ಟಿಟ್ಯುಯೆನ್ಸಿಯಲ್ಲಿ ೧೭ ಟ್ಯಾಂಕುಗಳು ಬ್ರೀಚ್ ಆಗಿ ಲಕ್ಷಾಂತರ ರೂಪಾಯಿ ಆಸ್ತಿಪಾಸ್ತಿ ಹಾಳಾಗಿದೆ ಅದೇರೀತಿ...